# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಕ್ರಿ, ಮಿಸಿಲೆ.ನಂ.42/2017 ಡಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಶ್ರೀನಿವಾಸ್ ಆರ್<br>ಸಂತೆಮರಳ್ಳಿ, ಚಾಮರಾಜನಗರ ತಾಲ್ಲೂಕು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 05-10-2024.** |

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ ಎಂ.ಬಿ ರವರಿಂದಃ**

ಅರ್ಜಿದಾರರು ನನ್ನ ಅಕ್ಕನ ಮಗಳು ಎಂದರೆ ಸರಿ. ಅರ್ಜಿದಾರರ ಅಕ್ಕ ನನ್ನ ಅಣ್ಣನನ್ನು, ಅರ್ಜಿದಾರರು ನನ್ನನ್ನು ವಿವಾಹವಾಗಿರುತ್ತಾರೆ ಎಂದರೆ ಸರಿ. ನನ್ನ ಅಣ್ಣ ಮತ್ತು ಅತ್ತಿಗೆ ಪ್ರತ್ಯೇಕವಾಗಿ ಬೇರೆ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಮನೆಯಲ್ಲಿ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಮಗ ಸಂತೆಮರಳ್ಳಿಯ ಹೊಸ ಮನೆಯಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು, ನನ್ನ ಮಗ, ನನ್ನ ತಾಯಿ ಮತ್ತು ಮದುವೆಯಾಗದೇ ಇರುವ ನನ್ನ ಅಕ್ಕ ಆ ಮನೆಯಲ್ಲಿ ವಾಸವಿರುತ್ತೇವೆ ಎಂದು ನುಡಿಯುತ್ತಾರೆ. ಹೊಸ ಮನೆ ಇರುವ ನಿವೇಶನವನ್ನು ಕೊಂಡುಕೊಳ್ಳಲು ಅರ್ಜಿದಾರರು ರೂ.2,00,000/- ಗಳನ್ನು ನೀಡಿದ್ದರು ಎಂದರೆ ಸರಿಯಲ್ಲ. ನಾನು ಮದುವೆಯಾದ ನಂತರ ಯಳಂದೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದೆವು ಎಂದರೆ ಸರಿ. ಆ ಸಮಯ ನನಗೆ ಮಾಸಿಕ ಸುಮಾರು ರೂ.50,000/- ವೇತನ ಬರುತ್ತಿತ್ತು ಎಂದರೆ ಸರಿಯಲ್ಲ. ನಮ್ಮ ಮದುವೆಯಾದ 2 ವರ್ಷಗಳಲ್ಲಿ ನನ್ನ ಮಗ ಜನಿಸಿರುತ್ತಾರೆ ಎಂದರೆ ಸರಿ. ನನ್ನ ಮಗನ ಬಾಣಂತನ ಮತ್ತು ಲಾಲನೆ ಪೋಷಣೆಯನ್ನು ನನ್ನ ಅಕ್ಕ ಅವರ ಮನೆಯಲ್ಲಿಯೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ಹಣ ಸಹಾಯವನ್ನು ನಾನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮಗನ ನಾಮಕರಣ ಶಾಸ್ತ್ರವನ್ನು ಸಹ ಅರ್ಜಿದಾರರ ತಂದೆ-ತಾಯಿಯವರೇ ನೆರವೇರಿಸಿರುತ್ತಾರೆ ಎಂದರೆ ಸರಿಯಲ್ಲ.

2. 1 ನೇ ಮಗುವಾದ ನಂತರ ಸುಮಾರು 1 ವರ್ಷಗಳ ಕಾಲ ನಾನು ಅರ್ಜಿದಾರರನ್ನು ಚೆನ್ನಾಗಿ ನೋಡಿಕೊಂಡಿದ್ದು, ಅರ್ಜಿದಾರರು 2 ನೇ ಮಗುವಿಗೆ ಗರ್ಭಿಣಿಯಾದ ನಂತರ ಆ ಮಗುವನ್ನು ನಾನು ಅಕೆಗೆ ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರು 2 ನೇ ಮಗುವಿಗೆ ಗರ್ಭಿಣಿ ಆದ ನಂತರ ಆಸ್ಪತ್ರೆಯ ವೆಚ್ಚವನ್ನು ಅರ್ಜಿದಾರರ ತಾಯಿಯವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಅರ್ಜಿದಾರರು 2 ನೇ ಮಗುವಿಗೆ ಗರ್ಭಿಣಿ ಆದ ನಂತರ ನಾನು ಆಕೆಯನ್ನು ನನ್ನ ಅಣ್ಣನ ಮನೆಗೆ ಬಿಡಲು ಹೋಗಿದ್ದು ಆ ಸಮಯ ನನ್ನ ಅಣ್ಣ ಅರ್ಜಿದಾರರನ್ನು ಆಕೆಯ ತವರು ಮನೆಯಲ್ಲಿಯೇ ಬಿಡುವಂತೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆನಂತರ ನಾನು ಅರ್ಜಿದಾರರನ್ನು ನನ್ನ ಮನೆಗೆ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಆಕೆಯ ತಾಯಿ ಮನೆಯಲ್ಲಿ ಇದ್ದ ಅರ್ಜಿದಾರರ ತಾಯಿ, ನನ್ನ ಅಣ್ಣ ಮತ್ತು ಚಿಕ್ಕಪ್ಪನವರು ಸೇರಿ ಒಂದು ರಾಜಿ ಪಂಚಾಯ್ತಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ರಾಜಿ ಪಂಚಾಯ್ತಿ ಸಮಯ ನಾನು, ನನ್ನ ಅಣ್ಣ ಮತ್ತು ಚಿಕ್ಕಪ್ಪ ಅರ್ಜಿದಾರರು ಮತ್ತು ಅವರ ತಂದೆ-ತಾಯಿಗಳ ಮೇಲೆ ಹಲ್ಲೆ ಮಾಡಿದ್ದು ಈ ಸಂಬಂಧ ಯಳಂದೂರು ಪೊಲೀಸ್ ಠಾಣೆಯಲ್ಲಿ ಒಂದು ದೂರು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು, ಅರ್ಜಿದಾರರನ್ನು ಮತ್ತು ಮಗುವನ್ನು ಮನೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಿಂದ ಅರ್ಜಿದಾರರನ್ನು ಮನೆಗೆ ಕರೆದುಕೊಂಡು ಹೋದ ನಂತರ ನಿವೇಶನವನ್ನು ಕೊಂಡುಕೊಳ್ಳಲು ಹಣದ ಅವಶ್ಯಕತೆ ಇದೆ, ಅರ್ಜಿದಾರರ ತವರು ಮನೆಯಿಂದ

ಹಣ ತರುವಂತೆ ಅರ್ಜಿದಾರರಿಗೆ ಕಿರುಕುಳ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಕಿರುಕುಳವನ್ನು ತಾಳಲಾರದೇ ಹಾಗೂ ನಾನು ಮನೆಯಿಂದ ಅರ್ಜಿದಾರರನ್ನು ಹೊರಹಾಕಿದ್ದರಿಂದ ಅರ್ಜಿದಾರರು ಅವರ ತವರು ಮನೆಯಲ್ಲಿಯೇ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅರ್ಜಿದಾರರೇ ಅವರ ತವರು ಮನೆಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

3. ಅರ್ಜಿದಾರರು ಅವರು ತವರು ಮನೆಯಲ್ಲಿ ಇದ್ದ ಸಮಯ ನಾನು ಚಾಮರಾಜನಗರದ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯವು ವಜಾಕರಿಸಿರುತ್ತೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆದೇಶದ ವಿರುದ್ಧ ನಾನು ಮಾನ್ಯ ಉಚ್ಛನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ. ನಾನು ಮೇಲ್ಮನವಿ ಸಲ್ಲಿಸಿರುವುದಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ, ಅದರೆ ನನ್ನ ವಿಚಾರಣೆ ಸಮಯದಲ್ಲಿ ತಿಳಿಸಿರುತ್ತೇನೆ. ನಾನು ಹೇಳುವಂತೆ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ನನ್ನ 2 ನೇ ಮಗು ಜನಿಸಿದ 3 ತಿಂಗಳ ನಂತರ ಹೃದಯ ಸಂಬಂಧಿ ಕಾಯಿಲೆಯಿಂದ ಮೃತಪಟ್ಟಿರುತ್ತದೆ ಎಂದರೆ ಸರಿಯಲ್ಲ. 2 ನೇ ಮಗುವಿನ ಆಸ್ಪತ್ರೆಯ ವೆಚ್ಚವನ್ನು ಅರ್ಜಿದಾರರ ತವರು ಮನೆಯರೇ ಭರಿಸಿದ್ದು, ನಾನು 2 ನೇ ಮಗುವಿನ ಚಿಕಿತ್ಸೆ ವೆಚ್ಚವನ್ನು ಭರಿಸಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಮಗುವನ್ನು ಗರ್ಭಪಾತ ಮಾಡಿಸುವಂತೆ ಅರ್ಜಿದಾರರಿಗೆ ತಿಳಿಸಿದ್ದರೂ ಅವರು ಗರ್ಭಪಾತ ಮಾಡಿಸಿಕೊಳ್ಳದೇ ಇದ್ದುದ್ದರಿಂದ ನಾನು 2 ನೇ ಮಗುವಿನ ಯಾವುದೇ ವೆಚ್ಚವನ್ನು ಭರಿಸಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಮಗು ಮೃತಪಟ್ಟ ವಿಚಾರವನ್ನು ಅರ್ಜಿದಾರರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ

ಮಗು ಮೃತಪಟ್ಟ ಸಮಯ ನಾನು ಗೂಳಿಪುರದ ಸರ್ಕಾರಿ ಶಾಲೆಯಲ್ಲಿ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಅರ್ಜಿದಾರರ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ.ನ್ಯಾದಂ. ನಂಜನಗೂಡು**